ನಗರ ಡಿವೀರ್ಜ.

ನಗರ ಡಿವೀರ್ಜ ಡಿಸ್ಟ್ರಿಕ್ಟ್ ಜಡ್ಜ್‌ರಯವರ ಕೋರ್ಟಿನಲ್ಲಿ.

1885ನೇ ಇಸವಿ ಮಿ|| ಅರ್ಜೀ ನಂಬರ 12.

ಮೃತಪಟ್ಟ ಬಾಣ್ಣತಿರುಮಲರಾವ್ ಮತ್ತು ನಾರಾಯಣರಾವ್ ಯಂಬವರ ಆಸ್ತಿ ವಿಷಯದಲ್ಲಿ—

ಅರ್ಜೀದಾರರು 1ನೇ ಗುಂಜೇರಾವ್, 2ನೇ ನರಸಿಂಗರಾವ್ 3ನೇ ನಾರಾಯಣರಾವ್, ಮೈನರುಗಳು ಗಾರ್ಡಿಯರ್ ತಾಯಿ ರಂಗೂಬಾಯಿ, ಮೃತಪಟ್ಟ ಸದರೀ ಬಾಣ್ಣತಿರುಮಲರಾಯನಿಗೆ ಮಕ್ಕಳು ನಾರಾಯೀರಾಯನಿಗೆ ಮೊಮ್ಮಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ಶಿವಮೊಗ್ಗ ಸ್ಥಳದ 1ನೇ ಗುಂಡೂರಾವ್ 2ನೇ ನರಸಿಂಗರಾವ್ 3ನೇ ನಾರಾಯಣರಾವ್ ಇವರುಗಳ ಗಾರ್ಡಿಯರ್ ತಾಯಿ ರಂಗೂಬಾಯಿಯು, ಶಿವಮೊಗ್ಗ ವಾಸಸ್ಥರಾಗಿ ಮೃತಪಟ್ಟ ಬಾಣ್ಣತಿರುಮಲರಾವ್ ಮತ್ತು ನಾರಾಯಣರಾವ್ ಇವರ ಜಿಂದಗಿ ಬಗ್ಯಾಗಿಬರತಕ್ಕ 4,000 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ, 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬ್ಯೆಈ ಕೋರ್ಟಿಗೆ ಪಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಂಗೂಬಾಯಿಯು ಅರ್ಜೀಯನ್ನು 1885ನೇ ಇಸವಿ ಮೇ ತಿಂಗಳು ತಾರೀಖು 29ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ನಿಮರ್ಕ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಾಣ್ಣತಿರುಮಲರಾವ್ ಮತ್ತು ನಾರಾಯಣರಾವ್ ಯಂಬವರ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಫಿಬ್ರವರಿ ತಿಂಗಳು 28ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ತಾರೀಖು 20ನೇ ಜನವರೀ 1885.

ಶಿವಮೊಗ್ಗ ಡಿಸ್ಟ್ರಿಕ್ಟ್ ನೆಗರ ತಾಲ್ಲೂಕಿನಲ್ಲಿ ಹೈದರಳಿಕ ಮತ್ತು ಲಕ್ಷ್ಮೀಪುರ ಫೂಟಿಗಳ ಟೋಲ್‌ಗೇಟ್ ಯಿಂಬ ಸುಂಕದ ಕಟ್ಟೆಗಳೊಳಗೆ ಸ್ಯ 1885ನೇ ಇಸವಿ ಏಪ್ರೆಲ್ 1ನೇ ಮುಕ್ತಂ ಲಾಗಾಯಿತು, 1886ನೇ ಇಸವಿ ಮಾರ್ಚೀ 31ನೇ ಮುಕ್ತಂವರಿಗೆ ಸುಂಕ ವಸೂಲ್ಮಾಡುವ ಸ್ವಾತಂತ್ರ್ಯವು 1885ನೇ ಇಸವಿ ಮಾರ್ಚೀ ತಾರೀಖು 20ರಲ್ಲು ನಗರ ತಾಲ್ಲೂಕು ಅಮಲ್ದಾರರಿಂದ ನಗರ ಮೊಕ್ಕಾಂನಲ್ಲು, ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತದೆ.

2. ವಸೂಲಿ ಹಕ್ಕನ್ನು ಕೊಂಡು ಕೊಳ್ಳುವ ಕಂಟ್ರಾಕ್ಟ್‌ದಾರನು ಇದಕ್ಕೆ ಲಗ್ಗತ್ತಾಗಿರುವ ಷೆಡ್ಯೂಲ್‌ನಲ್ಲಿ ಸಮೂದಾಗಿರುವ ದರಗಳ ಮೇರಿಗೇನಿ ಟೋಲ್ ವಸೂಲ್ಮಾಡಬೇಕಾದ್ದಲ್ಲದೆ ಜಾಸ್ತಿ ದರಗಳನ್ನು ವಸೂಲ್ಮಾಡಕೂಡದು. ಮತ್ತು ಆತನು 1876ನೇ ಇಸವಿ ನವಂಬರ್ 4ನೇ ಮುಕ್ತಂ 274ನೇ ನಂಬರುಳ್ಳ ಲೇಟ್ ಚೀಫ್ ಕಮ್ಮಿಷನರ್ ಸಾಹೆಬರವರ ನೋಟಿಫಿಕೇಷನ್ನಿ ಘಾಯಿಷ್ಮಾಗಿರುವ ರೂಲ್ಸ್ ಪ್ರಕಾರ ನಡಕೊಳ್ಳಬೇಕು. ಸರಕಾರ ಸ್ವತ್ತು ಮತ್ತು ಸರಕಾರ ಕೆಲಸದ ಮೇಲೆ ಹೋಗುವ ಸರಕಾರ ಉದ್ಯೋಗಸ್ತರು ಸುದಾ ಸುಂಕ ವಸೂಲಿಯಿಂದ ವಿನಾಯಿಸಲ್ಪಟ್ಟಿರುತ್ತಾರೆ.

3. ಜಡ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಅಂಗಿಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಡಿಪ್ಯೂಟಿ ಕಮ್ಮಿಷನರವರು ಅಧಿಕಾರ ವುಳಸಿಕೊಂಡಿರುತ್ತಾರೆ.

4. ಯಾವನ ದರಖಾಸ್ತು ಅಂಗೀಕರಿಸಲ್ಪಡುತ್ತೆಯೋ ಆವನು ಕೂಡ್ಲೆ ದರಖಾಸ್ತು ಮೊಬಲಗಿನಲ್ಲಿ ಆರರಲ್ಲಿ ಒಂದು ಅಂಕದ ಮೊಬಲಗನ್ನು ಅಡ್ವಾನ್ಸಾಗಿ ಠೇವಣೀ ಇಟ್ಟು, ಬಾಕೀ ಮೊಬಲಗನ್ನು 1885ನೇ ಇಸವಿ ಏಪ್ರೆಲ್ 20ನೇ ಮುಕ್ತಂ ಲಾಗಾಯಿತು ಸಮನಾದ 10 ಖಿಸ್ತುಗಳಾಗಿ ಪ್ರತಿ ತಿಂಗಳ 20ನೇ ತಾರೀಖಿಗೆ ಪಾವತೀ ಮಾಡಬೇಕು. ಠೇವಣೀ ಮೊಬಲಗು 11 ವ 12ನೇ ಖಿಸ್ತುಗೆಗೆ ವ್ಯಯಯೋಗಿಸಲ್ಪಡುವದು. ದರಖಾಸ್ತುದಾರನು ಮಾಹೆವಾರ್ ಖಿಸ್ತುಮೊಬಲಗನ್ನು ತಪ್ಪದೆ ಕೊಡುತ್ತಾ ಬರುವದಕ್ಕೆ ಒಬ್ಬನನ್ನು ಜಾಮೀನು ಕೊಡಬೇಕು.

5. ಠೇವಣೀ ಇಡದೆ ಇದ್ದರೆ ಅಥವಾ ಜಾಮೀನು ಕೊಡದೆ ಇದ್ದರೆ ದರಖಾಸ್ತುದಾರಗೆ ಲ್ಯುಸಾನುಕರವಾಗಿ ಕಂಟ್ರಾಕ್ಟು 2ನೇ ಹರಾಜ್ ಮಾಡಲ್ಪಡುವದು, ಖಿಸ್ತುಪ್ರಕಾರ ಪಣ ಕೊಡುವದಕ್ಕೆ ತಪ್ಪಿ ಪಾವತೀ ತಾರೀಖುವರಿಗೆ ತಿಂಗಳು 1ಕ್ಕೆ ರೂಪಾಯಿ 1ಕ್ಕೆ

1 ಕಾಸಿನಂತೆ ಬಡ್ಡಿ ವಸೂಲ್ಮಾಡಲ್ಪಡುವದು; ಮತ್ತು ಚಿಪ್ಪುಟಿ ಕಮ್ಮಿಷನರವರು ತಮಗೆ ಯುಕ್ತ ತೋರುವಂತೆ ಜಾಮೀನಿದಾರನ ಅಪೇಕ್ಷೆ ಪ್ರಕಾರ ಕಂಟ್ರಾಕ್ಟು 2ನೇ ಪರಾಜು ಮಾಡಿಸಲ್ಪಡುವದಕ್ಕೆ ಗುರಿಯಾಗತಕ್ಕದ್ದು, ಅದರಿಂದ ಯೇನಾದರೂ ನಷ್ಟ ಸಂಭವಿಸಿದರೆ ಅದು ಕಂಟ್ರಾಕ್ಟುದಾರನಿಂದ ಅಥವಾ ಜಾಮೀನುದಾರನಿಂದ ವಸೂಲ್ಮಾಡಲ್ಪಡತಕ್ಕದ್ದು.

6. ದರಖಾಸ್ತು ಮೊಲಗು ತಿಮಾಯಿ 4—5ನೇ ಕಲಂಗಳಲ್ಲಿ ನಮೂದಾದ ಪ್ರತ್ತಿಗೆ ನಳಪಟ್ಟು ಖಜಾನೆಗೆ ಸಲಾಯಿಸುವ ಸದರೀ ಕಂಟ್ರಾಕ್ಟು ಮೊಬಲಗಿನ ರೂಪಾಯಿ 1ಕ್ಕೆ ಒಂದು ಆಣೆಯಂತೆ ಲೋಕಲ್‌ಸೆಸ್ ಕೊಡಲಿಕ್ಕೆ ಕಂಟ್ರಾಕ್ಟುದಾರನು ಬದ್ಧನಾಗಿರುತ್ತಾನೆ.

7. ಪ್ರತಿ ದಿವಸದ ಟೋಲ್ ವಸೂಲಿ ತೋರಿಸುವ ಲೆಕ್ಕವನ್ನು ಇಪಲು ಸಹ ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಉದ್ಯೋಗಸ್ಥರ ಇನ್‌ಸ್ಪೆಕ್ಷನಿಗೆ ಲೆಕ್ಕ ನಳಗಾಗಿನತಕ್ಕದ್ದು, ಮತ್ತು ಆತನು ತಾಲ್ಲೂಕಿಗೆ ಮಾಹೆವಾರಿ ಲೆಕ್ಕವನ್ನು ಕೊಡತಕ್ಕದ್ದು.

8. ಘಾಟಿಯಲ್ಲಿರತಕ್ಕ ಟೋಲ್ ಮನೆ ಮತ್ತು ಗೇಟನ್ನು ಕಂಟ್ರಾಕ್ಟುದಾರ ಉಪಯೋಗಿಸತಕ್ಕದ್ದು, ಮತ್ತು ಅವುಗಳನ್ನ ಆತನು ಪೂರಾ ದುರಸ್ತಿನಲ್ಲಿಟ್ಟು ಕೊಂಡಿರತಕ್ಕದ್ದು.

ದರಗಳ ಪಟ್ಟಿ.

		ರೂ.	ಆ.	ಪೈ.
1	ಪ್ರತಿ ನಾಲ್ಕು ಚಕ್ರದ ಭಂಡಿಗೆ	2	0	0
2	ಪ್ರತಿ ಯರಡು ಡಿಟೋ	1	0	0
3	ಪ್ರತಿ ಯಕ್ತಾ ಮೆಲೂ	0	4	0
4	ಸ್ಪ್ರಿಂಗ್‌ಯಾನೆ ಬಿಲ್ಲಿನ ಮೇಲೆ ಇರುವ ಬಾಡಿಗೆ ಭಂಡಿ ಪ್ರತಿ 1ಕ್ಕೆ.	0	2	0
5	ಎಟು ಯತ್ತುಗಳಿಂದ ಯಾ ಕೋಣಗಳಿಂದ, ಕುದುರೆಗಳಿಂದ, ಟಾಕಣಗಳಿಂದ, ಕತ್ತೆಗಳಿಂದ, ಯಾ ಹೇಸರ ಕತ್ತೆಗಳಿಂದ ಯಳೆಯಲ್ಪಟ್ಟ ಬಿಲ್ಲಿನ ಮೇಲೆ ಯಿಲ್ಲದ ಪ್ರತಿ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿದ್ದರೆ	1	8	0
6	ಡಿಟೋ ಡಿಟೋ ಡಿಟೋ ಭರ್ತೀ ಇಲ್ಲದಿದ್ದರೆ	0	8	0
7	ಆರು ಯತ್ತುಗಳು ವಗ್ಗೈರೆಗಳಿಂದ ಯಳೆಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತೀಯಾಗಿದ್ದರೆ ..	0	12	0
8	ಡಿಟೋ ಡಿಟೋ ಡಿಟೋ ಭರ್ತೀ ಯಿಲ್ಲದಿದ್ದರೆ.	0	6	0
9	ನಾಲ್ಕು ಯತ್ತುಗಳು ವಗ್ಗೈರೆಗಳಿಂದ ಯಳೆಯಲ್ಪಟ್ಟ ಗಾಡಿ ಮತ್ತು ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿದ್ದರೆ.	0	8	0
10	ಡಿಟೋ ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ	0	4	0
11	ಯರಡು ಯತ್ತುಗಳಿಂದ ಯಳೆಯಲ್ಪಟ್ಟ ಗಾಡಿ ಯಾ ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿದ್ದರೆ ..	0	4	0
12	ಡಿಟೋ ಡಿಟೋ ಇಲ್ಲದಿದ್ದರೆ.	0	2	0
13	ಕೋಣಗಳು ಯಾ ಯತ್ತುಗಳು ರಾಸು 1ಕ್ಕೆ ಹೊರೆ ಹೊರಿಸಲ್ಪಟ್ಟಿದ್ದರೆ	0	1	0
14	ಡಿಟೋ ಡಿಟೋ ಹೊರೆ ಇಲ್ಲದಿದ್ದರೆ	0	0	3
15	ಪ್ರತಿ ಆನೆಗೂ	1	8	0
16	ಪ್ರತಿ ವಂಟೆಗೂ ಹೊರೆ ಹೊರಿಸಲ್ಪಟ್ಟಿದ್ದರೆ	0	8	0
17	ಡಿಟೋ ಹೊರೆ ಇಲ್ಲದಿದ್ದರೆ	0	4	0
18	ಡಿಟೋ ಕುದರೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	1	6
19	ಹೊರೆ ಇಲ್ಲದ ಯಾ ಹಿಡದುಕೊಂಡು ಹೋಗುವ ಪ್ರತಿ ಕುದರೆಗೂ.	0	0	9
20	ಪ್ರತಿ ತಟ್ಟು ಯಾ ಹೇಸರ ಕತ್ತೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ ..	0	0	9
21	ಪ್ರತಿತಟ್ಟು ಯಾ ಹೇಸರಕತ್ತೆಗೂ ಹೊರೆ ಇಲ್ಲದ ಯಾ ಹಿಡದುಕೊಂಡು ಹೋಗಲ್ಪಡುವದಕ್ಕೆ ..	0	0	6
22	ಪ್ರತಿ ಕತ್ತೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ ..	0	0	6
23	ಹೊರೆ ಇಲ್ಲದ ಯಾ ಹಿಡದುಕೊಂಡು ಹೋಗಲ್ಪಡುವ ಪ್ರತಿ ಕತ್ತೆಗೂ	0	0	1
24	ಪ್ರತಿ ಕುರಿ, ಮೇಕೆ ಯಾ ಹಂದಿಗೂ	0	0	1
25	ಯಂಟು ಭೋಯಿಗಳಿಗೊಜನೆ ಪ್ರತಿ ಡೋಲಿ, ಪಾಲಿಬಿ ಯಾ ಟಾಂಜಾನಿಗೂ	1	0	0
26	ಆರು ಭೋಯಿಗಳಿಗೊಡನೆ ಡಿಟೋ. ಡಿಟೋ	0	12	0

					ರೂ.	ಆ.	ಪೈ.
27	ನಾಲ್ಕು ಭೋಯಿಗಳೊಡನೆ ಡಿಟೋ	ಡಿಟೋ	..	..	0	8	0
28	ಇಬ್ಬರು ಭೋಯಿಗಳೊಡನೆ ಡಿಟೊ	ಡಿಟೋ	..	..	0	4	0

ನಡದು ಬರುವ ಮಾರ್ಗಸ್ಥರ ಮೇಲೆ ಟೋಲ್ ವಸೂಲ್ಮಾಡತಕ್ಕದ್ದಲ್ಲಾ.

ಜಿ. ಯಫ್. ಮೈಕಲ್‌ಜಾನ್,
ಡೆಪ್ಯೂಟಿ ಕಮ್ಮಿಷನರ್.

ತಾರೀಖು 20ನೇ ಜನವರೀ 1885.

ಇದರಿಂದ ಪ್ರಕಟಪಡಿಸುವದೇನಂದರೆ—ಸ್ಯ 1878ನೇ ಇಸವಿ ಜೂನ್ 8ನೇ ಮರಕೂಮಿನ ಫಾರೆಸ್ಟು ರೂಲ್ಸಿನ ಪೈಕೀ 13ನೇ ರೂಲಿನ ನಿಬಂಧನೆಗಳನುಸರಿಸಿ ಇದರಡಿಕಂಡ ಸ್ಟೇಟ್ ಫಾರೆಸ್ಟುಗಳು ಮತ್ತು ಪ್ಲಾಂಟೇಷ್ಣಗಳು ಸ್ಯ 1885ನೇ ಇಸವಿ ಜನವರೀ 25ನೇ ಮರಕೂಂ ಲಾಗಾಯಿತು ಅದೇ ಇಸವಿ ಮೇ 31ನೇ ಮರ್ಕೂಂವರಿಗೆ ಬೇಟೆಗಾರರಿಗೂ ಮತ್ತು ಇತರರಿಗೂ ಬಂದ್ ಮಾಡಲ್ಪಟ್ಟಿರುತ್ತೆ:—

ಲಕ್ಕುವಳ್ಳಿ ಸ್ಟೇಟ್ ಫಾರೆಸ್ಟು	..	ತರೀಕೆರೆ ತಾಲ್ಲೂಕು.
ಡಿಟೋ ತೇಗದ ಪ್ಲಾಂಟೇಷ್ಣ	..	ಡಿಟೋ.
ಸಕ್ರೆಬೈಲ್ ಸ್ಟೇಟ್ ಫಾರೆಸ್ಟು	..	ಶಿವಮೊಗ್ಗ ತಾಲ್ಲೂಕು.
ಡಿಟೋ ತೇಗದ ಪ್ಲಾಂಟೇಷ್ಣ	..	ಡಿಟೋ.
ಕಂಕರಗುಡ್ಡ ಸ್ಟೇಟ್ ಫಾರೆಸ್ಟು	..	ಡಿಟೋ.
ಆಲ್‌ಕೊಳ್ಳದ ಸಂದಲ್ ರಿಜರ್ವ್	..	ಡಿಟೋ.
ಅನಾಮನಗುತ್ತೆ ಡಿಟೋ	..	ಡಿಟೋ
ಹೆಬ್ಬೆ ತೇಗದ ಪ್ಲಾಂಟೇಷ್ಣ	..	ಕೊಪ್ಪ ತಾಲ್ಲೂಕು.

ಇ. ಪಿ. ಲವರಿ,
ಅಸಿಸ್ಟೆಂಟ್ ಕಲೆಕ್ಟರ್ ಆಫ್ ಫಾರೆಸ್ಟ್ಸ್.

ಮೈಸೂರು ಸ್ಟೇಟ್ ರೈಲ್ವೆ.

ತಾರೀಖು 3ನೇ ಮಾರ್ಚೀ 1885.

ಸ್ಯ 1885ನೇ ಇಸವಿ ಏಪ್ರೆಲ್ ಗುರ್ತೇ ಲಾಗಾಯತು ಸೆಪ್ಟಂಬರ್ 30ನೇ ಮರ್ಕೂಂ ವರಿಗೆ ಮೈಸೂರು ಸ್ಟೇಟ್‌ರೆಯಿಲ್ವೇಯ ಉಪಯೋಗಕ್ಕೋಸ್ಕರ ಬೇಕಾದ ನಾಟಾಗಳನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಬಂದುಮಾಡಲ್ಪಟ್ಟ ದರಖಾಸ್ತುಗಳನ್ನು ಇದರಡಿ ರುಜು ಮಾಡಿರುವವರು ಸ್ಯ 1885ನೇ ಇಸವಿ ಮಾರ್ಚಿ 28ನೇ ಮರ್ಕೂಂ ಮಧ್ಯಾನ್ನದ ವರಿಗೆ ತೆಗದುಕೊಳ್ಳುತ್ತಾರೆ. ಸದರೀ ನಾಟಾಗಳು ಸ್ಟೋರ್‌ಕೀಪರಿಗೆ ಆಗಿಂದಾಗ್ಯೆ ಬೇಕಾಗಬಹುದಾದ ತೇದಾದಿನಪ್ಪು ಮೈಸೂರು ಸ್ಟೇಟ್ ರೆಯಿಲ್ವೇಯ ಜನರಲ್ ಸ್ಟೋರಿನಲ್ಲಿ ವಪ್ಪಿಸಲ್ಪಡತಕ್ಕದ್ದು.

2. ದರಖಾಸ್ತುಗಳು "ಮೈಸೂರು ಸ್ಟೇಟ್ ರೆಯಿಲ್ವೆಗೆ ನಾಟಾ ಸರಬರಾಯಿ ಬಗ್ಯೆ ದರಖಾಸ್ತುಗಳು" ಯೆಂದು ಮೇಲವಿಳಾಸ ಬರೆಯಲ್ಪಡತಕ್ಕದ್ದು.

3. ನಗದಾಗಿಯಾಗಲಿ, ಕರೆನ್ಸಿ ನೋಟುಗಳ ಮೂಲಕವಾಗಿಯಾಗಲಿ 100 ರೂಪಾಯಿ ಜೇವಣಿನಿ ಬಂದ ಹೊರ್ತು ಯಾವ ದರಖಾಸ್ತು ತೆಗದುಕೊಳ್ಳಲ್ಪಡಲಾರದು.

4. ಮ್ಯಾನೇಜರರು ಕಮ್ಮೀ ದರದ ದರಖಾಸ್ತನ್ನಾಗಲಿ, ಇನ್ಯಾವ ದರಖಾಸ್ತನ್ನಾಗಲಿ ಅಂಗೀಕರಿಸಲು ಬದ್ಧರಾಗಿರುವದಿಲ್ಲವು.

5. ದರಖಾಸ್ತುಗಳು ಮ್ಯಾನೇಜರರ ಆಫೀಸಿನಲ್ಲಿ ಕೊಂದ ಬಹುದಾದ - ನಮೂನೆಯಲ್ಲಿ ಬರಿಯಲ್ಪಡತಕ್ಕವು, ಮತ್ತು ಇನ್ಯಾವ ಸಂಗತಿಗಳನ್ನಾದರೂ ಸದರೀ ಆಫೀಸಿನಲ್ಲಿ ಕೇಳಿ ತಿಳದುಕೊಳ್ಳಬಹುದು.